ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ: 080–22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು–560001.

ಸಂಖ್ಯೆ: ಕಾಶಿಇ/ಶೈವಿ/22/ಸುತ್ತೋಲೆ/2018–19

ದಿನಾಂಕ: 28.05.2018

# ಸುತ್ತೋಲೆ

ವಿಷಯ: ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಆಯೋಜಿಸುತ್ತಿರುವ 2017–18ನೇ ಸಾಲಿನ "ರಾಜ್ಯ ಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆ" ಯಲ್ಲಿ ಪದವಿ ವಿಜ್ಞಾನ ವಿದ್ಯಾರ್ಥಿಗಳು ಭಾಗವಹಿಸುವ ಬಗ್ಗೆ.

ಉಲ್ಲೇಖ: ಅಧ್ಯಕ್ಷರು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು, ರವರ ಪತ್ರ ಸಂಖ್ಯೆ:6.5.2/Ex/2018-19/4272 dt: 17.05.2018.

* * * * * *

ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಕ್ರಿಯಾಶೀಲತೆ ಹಾಗೂ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಉದ್ದೇಶದಿಂದ ರಾಜ್ಯದ ಪದವಿ ಕಾಲೇಜುಗಳ ವಿಜ್ಞಾನ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು 2017–18ನೇ ಸಾಲಿನ **"ರಾಜ್ಯಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆ"** ಯನ್ನು ಆಯೋಜಿಸಿದೆ. ಸದರಿ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆಯ ಕುರಿತ ಕರಪತ್ರವನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ್ದು, ಇದನ್ನು ಕಾಲೇಜಿನ ಪ್ರಕಟಣಾ ಫಲಕದಲ್ಲಿ ಪ್ರದರ್ಶಿಸಿ ಎಲ್ಲಾ ವಿದ್ಯಾರ್ಥಿಗಳ ಹಾಗೂ ಉಪನ್ಯಾಸಕರ ಗಮನಕ್ಕೆ ತಂದು ಸದರಿ ಕರಪತ್ರದಲ್ಲಿ ತಿಳಿಸಿರುವಂತೆ ಆಸಕ್ತ ವಿದ್ಯಾರ್ಥಿಗಳು ಸದರಿ ವಸ್ತುಪ್ರದರ್ಶನ ಸ್ಪರ್ಧೆಯಲ್ಲಿ ಭಾಗವಹಿಸಲು ಅನುಕೂಲಕರವಾಗುವಂತೆ ಅಗತ್ಯ ಕ್ರಮ ಕೈಗೊಳ್ಳಲು ಎಲ್ಲಾ ಸರ್ಕಾರಿ / ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

ವಿಭಾಗ ಮಟ್ಟದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಮತ್ತು ಮಾರ್ಗದರ್ಶಿ ಉಪನ್ಯಾಸಕರಿಗೆ ಪರಿಷತ್ತು ಪ್ರಶಸ್ತಿ ಪತ್ರ / ಅಭಿನಂದನಾ ಪತ್ರ, ಊಟ ಮತ್ತು ಕಾಫಿಯ ವ್ಯವಸ್ಥೆಯನ್ನು ಹಾಗೂ ರಾಜ್ಯ ಮಟ್ಟದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಮತ್ತು ಮಾರ್ಗದರ್ಶಿ ಉಪನ್ಯಾಸಕರಿಗೆ ಮೇಲೆ ತಿಳಿಸಿರುವುದರೊಂದಿಗೆ ವಸತಿ ವ್ಯವಸ್ಥೆಯನ್ನು ಒದಗಿಸುತ್ತದೆ. ವಿಭಾಗ ಮಟ್ಟದ ಸ್ಪರ್ಧೆಯನ್ನು ಕರಾವಿಪದ ಆಯಾ ಜಿಲ್ಲಾ ಸಮಿತಿಯು ನಿರ್ವಹಿಸುವುದು.

Website dt

ಹೆಚ್ಚಿನ ವಿವರಗಳಿಗೆ : **ಡಾ. ಕುಂಟೆಪ್ಪ ಗೌರಿಪುರ, ರಾಜ್ಯ ಸಂಚಾಲಕರು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು,** ರವರನ್ನು ಸಂಪರ್ಕಿಸಬಹುದು. ಮೊ:9980759704.

1/6/18

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ:**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲಬರ್ಗಾ – ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ/ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ರವಾನಿಸಲು ಸೂಚಿಸಲಾಗಿದೆ.
2. ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಪ್ರಾದೇಶಿಕ ಜಂಟಿ ನಿರ್ದೇಶಕರ ಮುಖಾಂತರ) - ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು– ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಲಾಗಿದೆ.

**ಪ್ರತಿಯನ್ನು:**

1. ಅಧ್ಯಕ್ಷರು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನ ಭವನ, ನಂ.24/2 & 24/3, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.
2. ಕಛೇರಿ ಪ್ರತಿ.

## ನೆರವು

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಬೆಂಗಳೂರು
ಕರ್ನಾಟಕ ಸರ್ಕಾರ

ಸಹಯೋಗ
ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
ಕರ್ನಾಟಕ ಸರ್ಕಾರ

ಸಂಘಟನೆ :
**ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು**

ವಿಜ್ಞಾನ ಭವನ, ನಂ. 24/2, 21ನೇ ಮುಖ್ಯ ರಸ್ತೆ,
ಬನಶಂಕರಿ 2ನೇ ಹಂತ, ಬೆಂಗಳೂರು 560 070
ಮೂ. 080-26718939 / 38 / 62 ಟೆಲಿಫ್ಯಾಕ್ಸ್ : 080-26718959
ವೆಬ್‌ಸೈಟ್: www.krvp.org
ಇಮೇಲ್: krvp.info@gmail.com




ತದೇಕಚಿತ್ತ, ಪರಿಶ್ರಮ ಮತ್ತು ನಿಷ್ಠೆಯಿಂದ ನಿಮ್ಮ ಕನಸುಗಳನ್ನು,
ನನಸು ಮಾಡಲು ಪ್ರಯತ್ನಿಸಿ. – ಪ್ರೊ॥ ಸಿ.ಎನ್.ಆರ್. ರಾವ್

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
ಕರ್ನಾಟಕ ಸರ್ಕಾರ

ಪದವಿ ವಿಜ್ಞಾನ ವಿದ್ಯಾರ್ಥಿಗಳಿಗಾಗಿ
ರಾಜ್ಯಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆ
**2016–17**

### ಕೇಂದ್ರ ವಿಷಯ

## ವಿಜ್ಞಾನ ಮತ್ತು ಸಮಾಜ
## SCIENCE & SOCIETY

**Today there are many challenging aspects where skills, efforts & innovations are necessary**



ಸರಳತೆ ಸತ್ಯದ ಚಿಹ್ನೆ : ಸೌಂದರ್ಯ ಸತ್ಯದ ವೈಭವ. – ಎಸ್. ಚಂದ್ರಶೇಖರ್

# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ಬೆಂಗಳೂರು

## ಪದವಿ ವಿಜ್ಞಾನ ವಿದ್ಯಾರ್ಥಿಗಳಿಗಾಗಿ ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆ

ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಕ್ರಿಯಾಶೀಲತೆ ಹಾಗೂ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಮೂಲ ಉದ್ದೇಶದಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ, ಕಾಲೇಜು ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ವಿಜ್ಞಾನ ಪದವಿ ವಿದ್ಯಾರ್ಥಿಗಳಿಗಾಗಿ ರಾಜ್ಯ ಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆಯನ್ನು ಕಳೆದ ಶೈಕ್ಷಣಿಕ ವರ್ಷದಂತೆ ಈ ಬಾರಿಯೂ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಸಂಘಟಿಸುತ್ತಿದೆ.

## ಉದ್ದೇಶಗಳು:

- ಪದವಿ ವಿದ್ಯಾರ್ಥಿಗಳಿಗೆ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಟ್ಟು ಪ್ರೋತ್ಸಾಹಿಸುವುದು.
- ಯುವಕರಲ್ಲಿರುವ ಸೃಜನಶೀಲತೆ, ಕೌಶಲ್ಯ ಹಾಗೂ ಕ್ರಿಯಾಶೀಲತೆಯನ್ನು ವ್ಯಕ್ತಪಡಿಸಲು ಒಂದು ವೇದಿಕೆಯನ್ನು ಒದಗಿಸುವುದು.
- ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಹಾಗೂ ಸ್ಪರ್ಧಾತ್ಮಕ ಮನೋಭಾವನೆಯನ್ನು ಬೆಳೆಸುವುದು.
- ವಿಜ್ಞಾನದ ತತ್ವಗಳನ್ನು ಬಳಸಿಕೊಂಡು ಜನಸಾಮಾನ್ಯರಿಗೆ ಉಪಯುಕ್ತವಾದ ತಂತ್ರಜ್ಞಾನ ಅಭಿವೃದ್ಧಿಪಡಿಸುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.
- ವಿಜ್ಞಾನ-ತಂತ್ರಜ್ಞಾನದ ಮಹತ್ವವನ್ನು ಹಾಗೂ ಅದರ ಉಪಯುಕ್ತತೆಯನ್ನು ಜನಸಾಮಾನ್ಯರಿಗೆ ತಿಳಿಸುವುದು.
- ಇತ್ತೀಚಿನ ದಿನಗಳಲ್ಲಿ ವಿಜ್ಞಾನ-ತಂತ್ರಜ್ಞಾನದಲ್ಲಿ ಆಗುತ್ತಿರುವ ನೂತನ ಬೆಳವಣಿಗೆಗಳನ್ನು ಹಾಗೂ ಆವಿಷ್ಕಾರಗಳನ್ನು ಜನಸಾಮಾನ್ಯರಿಗೆ ತಲುಪಿಸುವುದು.



ವಿಜ್ಞಾನ ಮತ್ತು ಕಂದಾಚಾರಗಳು ಒಟ್ಟಿಗೆ ಇರುತ್ತವೆ.
ಆದರೆ ಅವು ಪರಸ್ಪರ ಪೂರಕವಲ್ಲ. - ವೈ. ನಾಯುಡಮ್ಮ

## ಕೇಂದ್ರ ವಿಷಯ: ವಿಜ್ಞಾನ ಮತ್ತು ಸಮಾಜ

## Focal theme : Science & Society

Sub themes: ಉಪಶೀರ್ಷಿಕೆಗಳು

ಸಂಪರ್ಕ ಕ್ರಾಂತಿ:

ಒಂದು ಕಾಲದಲ್ಲಿ ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ಅಥವಾ ಸಮುದಾಯಕ್ಕೆ ಸಂಪರ್ಕಿಸಲು ಮೀಸಲಾಗಿದ್ದ ಸಂಪರ್ಕ ವ್ಯವಸ್ಥೆಯಲ್ಲಿ ಇಂದು ಅಗಾಧ ಬದಲಾವಣೆ ಉಂಟಾಗಿದೆ. ಅಂಚೆ, ಕೋರಿಯರ್, ದೂರವಾಣಿ, ಈ-ಮೇಲ್, ಸೆಲ್‌ಫೋನ್, ಅಂತರ್ಜಾಲ, ವಿಡಿಯೋ-ಕಾನ್ಫರೆನ್ಸಿಂಗ್, ಸ್ಕೈಪ್ ಮುಂತಾದ ಸಂಪರ್ಕ ವಿಧಾನಗಳು ವಿವಿಧ ಕ್ಷೇತ್ರಗಳಲ್ಲಿ (ಉದಾಹರಣೆಗೆ ಕೃಷಿ, ತೋಟಗಾರಿಕೆ, ಶೈತ್ಯೀಕರಣ, ವಾತಾವರಣದಲ್ಲಿ ಬದಲಾವಣೆಗಳ ಮುನ್ಸೂಚನೆ, ಸಂಪನ್ಮೂಲಗಳ ಕ್ರೋಢೀಕರಣ, ಮಾರುಕಟ್ಟೆಯ ಟ್ರೆಂಡ್), ಸಮಾಜದ ಉನ್ನತಿಗಾಗಿ ಬಳಸಬಹುದಾದ ಅವಕಾಶಗಳ ಕುರಿತು ಮಾಹಿತಿಯನ್ನು ತಾವು ವಿನ್ಯಾಸಗೊಳಿಸುವ ವಿಜ್ಞಾನ ಪ್ರದರ್ಶನ / ಮಾದರಿಗಳಲ್ಲಿ ಅಳವಡಿಸಿಕೊಳ್ಳಬಹುದಾಗಿದೆ.

**Communication Revolution:**

There has been a great revolution in the field of communication. Methods like post, courier, telephone, e-mail, cell phone, internet, video conferencing, skype have been responsible for further breakthrough in various other fields like Agriculture, Horticulture, preservation by cold storage, weather forcasting, mobilizing resources, understanding market trends etc. All these things are helping for the betterment of human kind and society at large. Students can use any of these related concepts or apply their mind for further innovative approach in designing their models and exhibits.

ಭೌತವಿಜ್ಞಾನದ ಬೆರಗು:

"ಅಣು"ವಿನಿಂದ 'ಅಂತರಿಕ್ಷ' ದವರೆಗೆ, ರಾಕೆಟ್ಟಿನ ನೂಕು 'ಬಲ'ದಿಂದ ವಿದ್ಯುತ್ 'ಬೇಲಿ'ಯವರೆಗೆ, ಭೌತವಿಜ್ಞಾನ ಕ್ಷೇತ್ರದಲ್ಲಿ ಇತ್ತೀಚೆಗೆ ಕೈಗೊಳ್ಳಲಾದ ಸಂಶೋಧನೆಗಳು, ಆವಿಷ್ಕಾರಗಳು, ಜನಸಾಮಾನ್ಯರಿಗಾಗಿ ದೈನಂದಿನ ಜೀವನದಲ್ಲಿ ತಂತ್ರಜ್ಞಾನದ ನೆರವಿನಿಂದ ಸಹಾಯಕವಾಗಿರುವ ಅಂಶಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ತಮ್ಮ ಪ್ರದರ್ಶನಿ/ಮಾದರಿಗಳ ವಿನ್ಯಾಸಗಳನ್ನು ಸಿದ್ಧಪಡಿಸಿಕೊಳ್ಳಬಹುದು. ಉದಾಹರಣೆಗೆ LED ಗಳ ಜಗತ್ತು, ಸ್ವಯಂಚಾಲಿತ ವ್ಯವಸ್ಥೆಗಳು, ಕಾಂತೀಯ ದ್ರವ ಪದಾರ್ಥಗಳು, ಧೂಮಕೇತುವಿನ ಮೇಲೆ ಆಕಾಶಯಾನದ ಅಧ್ಯಯನ, ಅತಿ ವೇಗದ ಮ್ಯಾಗ್ಲೇವ್ ರೈಲು, ಹಾರುವ ಕಾರುಗಳು, ನ್ಯಾನೊ ತಂತ್ರಜ್ಞಾನ ಆಧಾರಿತ ಬೆಳಕು ನಿಯಂತ್ರಿಸುವ ಕಿಟಕಿಗಳು, ಕೊಳೆಯಾಗದ ಬಟ್ಟೆಗಳು, ಶೂಗಳು ಇತ್ಯಾದಿ.

**Wonders of Physics :**

Students can choose any concepts based on physics and its utilities in day to day life. It can be from Atom to Space Research, Force required for launching a Rocket to Amount of Electricity required for Electric Fences, latest innovations in the field of physics which are going to make life easier in future. Super fast Maglev Trains, Magnetic Fluids, Super bright LED's, Automated systems, Robotics, Flying Cars, Colour Changing Windows, Dirt-Averting shoes and Dirt-Averting clothes based on Nanotechnology etc.

ಜೀವ ಜಗತ್ತು:

ಜೈವಿಕ ವಿಜ್ಞಾನ ಕ್ಷೇತ್ರದಲ್ಲಿ ಇತ್ತೀಚೆಗೆ ಕೈಗೊಳ್ಳಲಾದ ಸಂಶೋಧನೆಗಳು, ಆವಿಷ್ಕಾರಗಳು, ಜೀವವೈವಿಧ್ಯ, ವಿವಿಧ ಜೀವಿಗಳು, ವಿಶಿಷ್ಟ ಸನ್ನಿವೇಶದಲ್ಲಿ ನೀಡಬಹುದಾದ ಪ್ರತಿಕ್ರಿಯೆಗಳು, ವಿಕಾಸದ ಹಂತಗಳು, ಉದಾಹರಣೆಗೆ ಗಿಡಮರಗಳಿಂದ ಹೊರಹೊಮ್ಮುವ ಸಂಗೀತ ಸಂಜ್ಞೆಗಳು, ಜೈವಿಕ ತಂತ್ರಜ್ಞಾನ, ವೈದ್ಯಕೀಯ ಕ್ಷೇತ್ರದಲ್ಲಿ ಶರೀರ ವಿಜ್ಞಾನಕ್ಕೆ ಸಂಬಂಧಿಸಿದ ಸಂಗತಿಗಳು. ಸಸ್ಯವಿಜ್ಞಾನ ಕ್ಷೇತ್ರದಲ್ಲಿ ವಿಜ್ಞಾನಿಗಳ ಸಾಧನೆಗಳು ಇತ್ಯಾದಿಗಳನ್ನು ವಿದ್ಯಾರ್ಥಿಗಳು ತಾವು ವಿನ್ಯಾಸಗೊಳಿಸುತ್ತಿರುವ ಪ್ರದರ್ಶನಿ/ಮಾದರಿಗಳಲ್ಲಿ ಅಳವಡಿಸಿಕೊಳ್ಳಬಹುದಾಗಿದೆ.

ಅತ್ಯಂತ ಆಶ್ಚರ್ಯಕರ ಘಟ್ಟದಲ್ಲಿರುವ ವಿಷಯವನ್ನು ತಿಳಿಯಲು
ತೊಡಗುವುದೇ ಸಂಶೋಧನಾ ಮಾರ್ಗ. - ಜಿಲಿಯ ಗ್ರೀನ್

## Bio-world :

Innov .ons and Breakthrough achieved in the field of biological sciences, biodiversity, variations, different life forms, Response to various stimulations Bio-technology applied in day to day life, Physiological research in the field of medicine. Contributions by scientist in the field of botany like musical notes/signals emitted by plants etc. can be used to design the models/exhibits.

### ನಮ್ಮ ತ್ಯಾಜ್ಯದ ನಿರ್ವಹಣೆ :

ಮಾನವನು ಕೈಗೊಳ್ಳುವ ದೈನಂದಿನ ಚಟುವಟಿಕೆಗಳಿಂದಾಗಿ ವಿವಿಧ ಕ್ಷೇತ್ರಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯ; ಪ್ರಸ್ತುತ ತಾಜ್ಯದ ವೈಜ್ಞಾನಿಕ ವಿಶ್ಲೇಷಣೆ ಹಾಗೂ ನಿರ್ವಹಣೆ ಕುರಿತಂತೆ ತಂತ್ರಜ್ಞಾನದ ನೆರವಿನಿಂದ ಕೈಗೊಳ್ಳಬಹುದಾದ ವಿಧಾನಗಳು, ತ್ಯಾಜ್ಯದಿಂದ ಶಕ್ತಿಯ ಮನರುತ್ಪಾದನೆ, ವಿವಿಧ ತ್ಯಾಜ್ಯಗಳು ಉದಾ: ಮುನಿಸಿಪಲ್ ತ್ಯಾಜ್ಯ, ಬಯೋಮೆಡಿಕಲ್ ವೈದ್ಯಕೀಯ ತ್ಯಾಜ್ಯ, ಅಪಾಯಕಾರಿ ತ್ಯಾಜ್ಯ, 'ಇ' ತ್ಯಾಜ್ಯ, ದ್ರವರೂಪದ ಕೈಗಾರಿಕಾ ತ್ಯಾಜ್ಯ, ಅನಿಲರೂಪದ ತ್ಯಾಜ್ಯಗಳ ನಿರ್ವಹಣೆ, ತ್ಯಾಜ್ಯ ಸಂಸ್ಕರಣೆಯಲ್ಲಿ ಬಳಸಲಾಗುವ ತಂತ್ರಜ್ಞಾನ ಮುಂತಾದ ಸಂಗತಿಗಳ ಕುರಿತು ಪ್ರದರ್ಶನಿಗಳ/ಮಾದರಿಗಳ ವಿನ್ಯಾಸ ಕೈಗೊಳ್ಳಬಹುದು.

## Managing our Waste :

Waste generation due to day to day activities, scientific analysis of waste, managing of various kinds of waste, converting waste into energy resource. Latest trends and technology in managing wastes like municipal waste, biomedical waste, toxic waste, 'e' waste, industrial waste, toxic liquid waste, poisonous gas emissions etc can become the base for design of models and exhibits.

### ಆಹಾರ ವಿಜ್ಞಾನ:

ನಾವು ಸೇವಿಸುವ ಆಹಾರ, ನಮ್ಮ ಜೀವನಶೈಲಿ ನಮ್ಮೆಲ್ಲರ ಆರೋಗ್ಯವನ್ನು ನಿರ್ಧರಿಸುತ್ತದೆ. ಕೆಲವು ಆಹಾರ ವಸ್ತುಗಳನ್ನು ನೈಸರ್ಗಿಕ ರೂಪದಲ್ಲಿಯೇ ಸೇವಿಸಿದರೆ ಇನ್ನೂ ಕೆಲವನ್ನು ಬೇಯಿಸದೇ ತಿನ್ನಲು ಸಾಧ್ಯವೇ ಇಲ್ಲ. ವಿವಿಧ ರೂಪದಲ್ಲಿರುವ ಆಹಾರ ವಸ್ತುಗಳಲ್ಲಿನ ಪೌಷ್ಠಿಕಾಂಶಗಳು, ಆಹಾರ ತಯಾರಿಕಾ ವಿಧಾನಗಳು, ಆಹಾರ ತಂತ್ರಜ್ಞಾನ, ಆಹಾರ ತಯಾರಿಕಾ ಕ್ಷೇತ್ರದಲ್ಲಿನ ಇತ್ತೀಚಿನ ಆವಿಷ್ಕಾರಗಳು, ಫಾಸ್ಟ್‌ಫುಡ್ ಸಂಸ್ಕೃತಿಯ ಸಂಭ್ರಮ ಹಾಗೂ ದುಷ್ಪರಿಣಾಮಗಳು. ಆಹಾರ ಹಾಗೂ ಆರೋಗ್ಯ ಇವುಗಳ ನಡುವಣ ಸಂಬಂಧ ಆಹಾರವನ್ನು ಸುರಕ್ಷಿತವಾಗಿ ಪ್ಯಾಕ್ ಮಾಡುವ ವಿಧಾನಗಳು. ಇವೇ ಮುಂತಾದ ವಿಷಯಗಳನ್ನು ವಿದ್ಯಾರ್ಥಿಗಳು ತಾವು ವಿನ್ಯಾಸಗೊಳಿಸುವ ವಿಜ್ಞಾನ ಮಾದರಿ / ಪ್ರದರ್ಶನಿಗಳಲ್ಲಿ ಬಳಸಿಕೊಳ್ಳಬಹುದು.

## Food Science / ಆಹಾರ ವಿಜ್ಞಾನ :

We know that our health condition is directly dependent of our food. Some of the food varieties can be consumed in natural form where as some others need to be cooked before consumption. What changes happen in food during cooking? Nutritional facts in different kinds of foods. Latest trends in food processing technology, Fast food trends and its impact on health, food packaging etc can be utilized for designing of your model/exhibit.

ನಿನ್ನೆಯಿಂದ ಕಲಿಯಿರಿ, ಇಂದಿಗಾಗಿ ಬಾಳಿರಿ, ನಾಳೆಯ ಬಗ್ಗೆ ಭರವಸೆಯಿರಲಿ. ಪ್ರಶ್ನಿಸುವುದನ್ನು ನಿಲ್ಲಿಸದಿರುವುದು ಮುಖ್ಯ. – ಆಲ್ಬರ್ಟ್ ಐನ್‌ಸ್ಟೈನ್

## ವಸ್ತು ಪ್ರದರ್ಶನದಲ್ಲಿ ಭಾಗವಹಿಸಲು ಅರ್ಹತೆಗಳು:

- ರಾಜ್ಯದ ಯಾವುದೇ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಪದವಿ ಕಾಲೇಜಿನಲ್ಲಿ ಬಿ.ಎಸ್ಸಿ. ಪ್ರಥಮ, ದ್ವಿತೀಯ ಅಥವಾ ತೃತೀಯ ವರ್ಷದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು.
- ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಮಾನ್ಯತೆ ಪಡೆದಿರುವ ಮಹಾವಿದ್ಯಾಲಯದ ವಿದ್ಯಾರ್ಥಿಗಳು
- ಪ್ರತಿ ಕಾಲೇಜಿನಿಂದ ಒಂದು ಉಪ ವಿಷಯಕ್ಕೆ ಒಂದು ತಂಡದಂತೆ ಒಟ್ಟು ಐದು ತಂಡಗಳವರೆಗೆ ಭಾಗವಹಿಸಲು ಅವಕಾಶವಿದೆ. ಪ್ರತಿ ತಂಡದಲ್ಲಿ ಇಬ್ಬರು ವಿದ್ಯಾರ್ಥಿಗಳು ಮಾತ್ರ ಭಾಗವಹಿಸಬೇಕು. ಪ್ರತಿ ತಂಡಕ್ಕೆ ಒಬ್ಬ ಮಾರ್ಗದರ್ಶಿ ಉಪನ್ಯಾಸಕರು ಮಾತ್ರ ಭಾಗವಹಿಸಬಹುದು. ಆದರೆ ಒಂದು ಕಾಲೇಜಿನಿಂದ 4 ಅಥವಾ 5 ತಂಡಗಳು ಭಾಗವಹಿಸಿದಲ್ಲಿ ಎಲ್ಲಾ ತಂಡಕ್ಕೆ ಸೇರಿ ಒಬ್ಬ ಮಾರ್ಗದರ್ಶಿ ಉಪನ್ಯಾಸಕರು ಮಾತ್ರ ಭಾಗವಹಿಸಲು ಅವಕಾಶವಿದೆ.

## ಗಮನಿಸಿ

ವಿಭಾಗ ಮಟ್ಟದ ಸ್ಪರ್ಧೆಗೆ ಭಾಗವಹಿಸುವ ವಿದ್ಯಾರ್ಥಿಗಳಿಗೆ ತಮ್ಮ ಸ್ಥಳದಿಂದ ಸ್ಪರ್ಧೆ ನಡೆಯುವ ಸ್ಥಳಕ್ಕೆ ಬಂದು ಹೋಗುವ ಸಾಮಾನ್ಯ ಬಸ್ಸಿನ ಪ್ರಯಾಣ ವೆಚ್ಚವನ್ನು ಸುತ್ತೋಲೆಯಲ್ಲಿ ನಮೂದಿಸಿದಂತೆ ಆಯಾ ಕಾಲೇಜಿನಲ್ಲಿ ಲಭ್ಯವಿರುವ ಸಂಚಿತ ನಿಧಿಯಿಂದ ಪಡೆಯುವುದು. ಸ್ಪರ್ಧೆ ನಡೆಯುವ ದಿನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಭೋಜನ ವ್ಯವಸ್ಥೆಯನ್ನು ಮಾಡಲಾಗುವುದು.

ರಾಜ್ಯ ಮಟ್ಟದ ಸ್ಪರ್ಧೆಗೆ ಭಾಗವಹಿಸುವ ವಿದ್ಯಾರ್ಥಿಗಳಿಗೆ ಮತ್ತು ಮಾರ್ಗದರ್ಶಿ ಉಪನ್ಯಾಸಕರಿಗೆ ತಮ್ಮ ಸ್ಥಳದಿಂದ ಸ್ಪರ್ಧೆ ನಡೆಯುವ ಸ್ಥಳಕ್ಕೆ ಬಂದು ಹೋಗುವ ಸಾಮಾನ್ಯ ಬಸ್ಸಿನ ಪ್ರಯಾಣ ವೆಚ್ಚವನ್ನು ಸುತ್ತೋಲೆ ಸಂಖ್ಯೆ: ಕಾಶಿಇ/ಶೈವಿ/68/ವಿಜ್ಞಾನ/2016-17 ದಿನಾಂಕ 23-11-2016 ರಲ್ಲಿ ನಮೂದಿಸಿದಂತೆ ಆಯಾ ಕಾಲೇಜಿನಲ್ಲಿ ಲಭ್ಯವಿರುವ ಸಂಚಿತ ನಿಧಿಯಿಂದ ಪಡೆಯುವುದು. ಊಟ ವಸತಿ ವ್ಯವಸ್ಥೆಯನ್ನು ಕರಾವಿಪ ಕಲ್ಪಿಸುವುದು. ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ/ಉಪನ್ಯಾಸಕರಿಗೆ ಓಓಡಿ ಸೌಲಭ್ಯವಿದೆ.

## ವಿಜ್ಞಾನ ವಸ್ತುಪ್ರದರ್ಶನ ಹಂತಗಳು:

**ವಿಭಾಗ ಹಾಗೂ ರಾಜ್ಯ ಮಟ್ಟ ಎರಡು ಹಂತಗಳಲ್ಲಿ ವಿಜ್ಞಾನ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗುವುದು.**

### ವಿಭಾಗೀಯ ಮಟ್ಟ

ಶೈಕ್ಷಣಿಕವಾಗಿ ವಿಭಾಗಿಸಲ್ಪಟ್ಟ ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಹಾಗೂ ಕಲಬುರ್ಗಿ ಈ ವಿಭಾಗಗಳ ಯಾವುದಾದರೊಂದು ನಗರದಲ್ಲಿ ಪ್ರಥಮ ಹಂತದ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗುವುದು. ಸ್ಪರ್ಧೆಯನ್ನು 2017ರ ಮಾರ್ಚ್ ತಿಂಗಳ ಒಳಗಾಗಿ ನಡೆಸಲಾಗುವುದು.

### ರಾಜ್ಯ ಮಟ್ಟ:

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಹಾಗೂ ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರು ನಿಗದಿಪಡಿಸುವ ಯಾವುದಾದರೊಂದು ಸೂಕ್ತ ಸ್ಥಳದಲ್ಲಿ 2017ರ ಏಪ್ರಿಲ್ ತಿಂಗಳಿನಲ್ಲಿ ನಡೆಸಲಾಗುವುದು.

ಸಿದ್ಧಾಂತವು ಮಾರ್ಗದರ್ಶಿ, ಪ್ರಯೋಗವು ತೀರ್ಪುಗಾರ. – ವಿವಿಧ ವಿಜ್ಞಾನಿಗಳ ಹೇಳಿಕೆ

## ನಗದು ಬಹುಮಾನಗಳು:

| ವಿಭಾಗ ಮಟ್ಟ | |
|---|---|
| ಪ್ರಥಮ | ರೂ. 3000/- |
| ದ್ವಿತೀಯ | ರೂ. 2000/- |
| ತೃತೀಯ | ರೂ. 1000/- |
| ಸಮಾಧಾನಕರ ಒಟ್ಟು - 2 | ಪ್ರತಿ ಒಂದಕ್ಕೆ ರೂ. 500-00, 500 x 2 = 1000/- |

| ರಾಜ್ಯ ಮಟ್ಟ | |
|---|---|
| ಪ್ರಥಮ | ರೂ. 5000/- |
| ದ್ವಿತೀಯ | ರೂ. 4000/- |
| ತೃತೀಯ | ರೂ. 3000/- |
| ಸಮಾಧಾನಕರ ಒಟ್ಟು - 2 | ಪ್ರತಿ ಒಂದಕ್ಕೆ ರೂ. 1000/- ರೂ. 1000/- x 2 = 2000/- |

## Criteria for evaluating exhibits/models

| Sl.No. | Common Evaluation Criteria | Maximum Marks |
|---|---|---|
| 1 | Selection of the Exhibit/Mode Relevance to the theme and sub-theme | 05 |
| 2 | Creativity, Originality, innovativeness | 25 |
| 3 | Scientific approach | 15 |
| 4 | Technical skill/workmanship | 20 |
| 5 | Application/utility; Educational value, Societal benefits | 15 |
| 6 | Economic, Portability, Durability | 10 |
| 7 | Presentation : Demonstration, Explanation, Display | 10 |
| | Total | 100 |

ಪದವಿ ವಿಜ್ಞಾನ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆ

2016-17 ರ ವಿಭಾಗ ಸಂಯೋಜಕರ ಪಟ್ಟಿ

| ವಲಯ | ವಲಯ ಸಂಯೋಜಕರು | ಸಂಪರ್ಕ ಸಂಖ್ಯೆ |
|---|---|---|
| ಧಾರವಾಡ | ಶ್ರೀ ಆರ್.ಎಸ್. ಪಾಟೀಲ್ | ಮೊ. 8867735715 |
| ಮಂಗಳೂರು | ಶ್ರೀ ಕಡಮಜಲು ಸುಭಾಸ್ ರೈ | ಮೊ. 9449106931 |
| ಕಲಬುರ್ಗಿ | ಶ್ರೀ ರಾಜಾಸಮರಸೇನ್ ಕೆ. ಮೋದಿ | ಮೊ. 9342134696 |
| ಶಿವಮೊಗ್ಗ | ಪ್ರೊ|| ಎಂ.ಟಿ. ಶಂಕರಪ್ಪ | ಮೊ. 9741570702 |
| ಮೈಸೂರು | ಶ್ರೀ ಎನ್.ಆರ್. ಮಂಜುನಾಥ್ | ಮೊ. 9620228023 |
| ಬೆಂಗಳೂರು | ಶ್ರೀ ಈ. ಬಸವರಾಜು | ಮೊ. 9448957666 |

ವಿಜ್ಞಾನದ ವಿದ್ಯಾರ್ಥಿಯು ಪರೀಕ್ಷಿಸುವುದರಿಂದ ಸಮರ್ಥನೆ ಮಾಡುವುದನ್ನು ಕಲಿತಿರುತ್ತಾನೆಯೇ ಹೊರತು ವಿಶ್ವಾಸದಿಂದಲ್ಲ' - ಥಾಮಸ್ ಎಚ್. ಹಕ್ಲೆ



**ಕರಾವಿಪ ಪರಿಚಯ :**

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವ ಮತ್ತು ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸುವ ಉದ್ದೇಶದಿಂದ 1980ರಲ್ಲಿ ಸ್ಥಾಪಿತವಾದ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರದ ನೆರವಿನ ರಾಜ್ಯಮಟ್ಟದ ಸ್ವಾಯತ್ತ ಸಂಸ್ಥೆಯಾಗಿದೆ.

**ಧ್ಯೇಯೋದ್ದೇಶಗಳು :**

- ✦ ವಿಜ್ಞಾನ, ವೈಜ್ಞಾನಿಕ ಮನೋಧರ್ಮ, ಔಪಚಾರಿಕ ಹಾಗೂ ಅನೌಪಚಾರಿಕ ವಿಜ್ಞಾನ ಶಿಕ್ಷಣ - ಇವುಗಳನ್ನು ಜನರಲ್ಲಿ, ಅದರಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿಪಡಿಸುವುದು.
- ✦ ಮುಖ್ಯವಾಗಿ ಕನ್ನಡದಲ್ಲಿ ಉಪನ್ಯಾಸ, ವಿಚಾರಸಂಕಿರಣ, ಸಾರ್ವಜನಿಕ ವಿಚಾರಗೋಷ್ಠಿ, ಶೈಕ್ಷಣಿಕ ಪ್ರವಾಸ, ವಸ್ತುಪ್ರದರ್ಶನಗಳನ್ನು ಏರ್ಪಡಿಸುವುದು ಮತ್ತು ವಿಜ್ಞಾನ ಪುಸ್ತಕಗಳು ಹಾಗೂ ನಿಯತಕಾಲಿಕಗಳನ್ನು ಪ್ರಕಟಿಸಿ ವಿತರಣೆ ಮಾಡುವುದರ ಮೂಲಕ ವಿಜ್ಞಾನವನ್ನು ಜನಪ್ರಿಯಗೊಳಿಸುವುದು.
- ✦ ವಿಜ್ಞಾನ ಸಂಘ, ಸಂಸ್ಥೆಗಳು ರೂಪುಗೊಂಡು ಅಭಿವೃದ್ಧಿಯಾಗಲು ಪ್ರೋತ್ಸಾಹ ನೀಡುವುದು ಹಾಗೂ ವಿಜ್ಞಾನ ಕೇಂದ್ರಗಳ ಸ್ಥಾಪನೆ ಹಾಗೂ ನಿರ್ವಹಣೆ.
- ✦ ವಿಜ್ಞಾನ ಬರಹಗಾರರು, ವಿಜ್ಞಾನಿಗಳು, ವಿಜ್ಞಾನ ಶಿಕ್ಷಕರು, ಕೈಗಾರಿಕೋದ್ಯಮಿಗಳು, ಪ್ರಕಾಶಕರು ಮತ್ತು ವಿಜ್ಞಾನವನ್ನು ಜನಪ್ರಿಯಗೊಳಿಸುವುದರಲ್ಲಿ ಆಸಕ್ತರಾಗಿರುವವರ ನಡುವೆ ಪರಸ್ಪರ ಸಂಪರ್ಕ ಬೆಳೆಯಲು ಪ್ರೋತ್ಸಾಹ ನೀಡುವುದು.

## ಕರಾವಿಪ ದಾನಿ ಸದಸ್ಯತ್ವ ಶುಲ್ಕ

**ಕರಾವಿಪ ಘಟಕಗಳಲ್ಲದೆ ಆಸಕ್ತ ವ್ಯಕ್ತಿ ಮತ್ತು ಸಂಘ ಸಂಸ್ಥೆಗಳು ದಾನಿಗಳಾಗಿ ಸದಸ್ಯತ್ವ ಪಡೆಯಬಹುದು.**

ದಾನಿ ಸದಸ್ಯತ್ವ ವೈಯಕ್ತಿಕ ರೂ.2000/- (ರೂ.10/- ಅರ್ಜಿ ಶುಲ್ಕ ಪ್ರತ್ಯೇಕ)
ದಾನಿ ಸದಸ್ಯತ್ವ ಸಾಂಸ್ಥಿಕ ರೂ.3,000/- (ರೂ.10/- ಅರ್ಜಿ ಶುಲ್ಕ ಪ್ರತ್ಯೇಕ)

ಶ್ರೀ ಗಿರೀಶ್ ಬಿ. ಕಡ್ಲೇವಾಡ
ಗೌರವ ಕಾರ್ಯದರ್ಶಿ
ಕರಾವಿಪ

ಎಸ್.ವಿ. ಸಂಕನೂರ
ಅಧ್ಯಕ್ಷರು, ಕರಾವಿಪ ಹಾಗು
ಶಾಸಕರು ವಿಧಾನ ಪರಿಷತ್ತು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
**ಡಾ. ಕುಂಟೆಪ್ಪ ಗೌರಿಪುರ**, ರಾಜ್ಯ ಸಂಚಾಲಕರು,
ಪದವಿ ವಿಜ್ಞಾನ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ
ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆ - 2016-17
ಮೊ : 9980759704

ಪ್ರಶ್ನಿಸದೆ ಏನನ್ನು ಒಪ್ಪಬೇಡಿ - ಡಾ. ಎಚ್. ನರಸಿಂಹಯ್ಯ